



# ಬಲಮುರಿ ಬೆಡಗು!

■ ಚಿತ್ರ- ಬರಹ
**ಗಣಂಗೂರು ನಂಜೇಗೌಡ**

ಬಲಮುರಿ ಅಕ್ಷರಶಃ ಪ್ರಕೃತಿ ಸುಂದರಿ. ತನ್ನ ಒನಪು, ವಯ್ಯಾರದಿಂದ ಪ್ರವಾಸಿಗರನ್ನು ಮೋಡಿ ಮಾಡುವ ಮಾಟಗಾತಿ; ಬೆಡಗು, ಬಿಂಕದ ಬಿನ್ನಾಣಗಾತಿ.

ಬಲಮುರಿ ಕೇವಲ ನೀರ ಝರಿಯಲ್ಲ; ಒಡ್ಡಿನ ಹಿಂದೆ, ಕಣ್ಣು ಹಾಯಿಸಿದಷ್ಟು ದೂರಕ್ಕೆ ಹಸಿರು ಮುಕ್ಕಳಿಸುವ ರಮ್ಯ ತಾಣ. ಸುತ್ತಲೂ ತೆಂಗು, ಕಂಗುಗಳು ತೊನೆದಾಡುತ್ತವೆ. ನದಿಯ ಇಬ್ಬದಿಯಲ್ಲಿ ಹಿಪ್ಪೆ, ಹೊಂಗೆ, ನೀರಂಜಿ, ನೇರಳೆ ಮರಗಳು ಕಿಲಕಿಲ ನಗುತ್ತವೆ. ಈ ಮರಗಳ ರೆಂಬೆಗಳಲ್ಲಿ, ನೀರ ಮಡುವಿನಲ್ಲಿ ಕುಳಿತ ಪಕ್ಷಿಗಳ ಕೊರಳೊಳಗಿಂದ ಹೊಮ್ಮುವ ಇಂಚರ ಕಾವೇರಿಯ ಜುಳು ಜುಳು ನಿನಾದಕ್ಕೆ ಹಿಮ್ಮೇಳವಾಗಿ ಸಂಗೀತ ಸುಧೆ ಹರಿಸುತ್ತದೆ. ಇಲ್ಲಿಗೆ ಕೂಗಳತೆ ದೂರದ ರಂಗನತಿಟ್ಟು ಪಕ್ಷಿಧಾಮದಿಂದ 'ಊಟ' ಅರಸಿ ಬರುವ ಪಕ್ಷಿಗಳು ಪೊದೆಯ ಮರೆಯಲ್ಲಿ ಹೊಂಚು ಹಾಕಿ ಬೇಟೆಯಾಡುವ ದೃಶ್ಯ ಮತ್ತೂ ಆಕರ್ಷಕ.

ವಿಹಾರಕ್ಕಾಗಿ ಮನಮೋಹಕ ಬಲಮುರಿಗೆ ಬರುವವರಲ್ಲಿ ಯುವ ಜೋಡಿಗಳದ್ದೇ ಮೇಲುಗೈ. ಒಡ್ಡಿನ ಮೇಲೆ ಈ ತುದಿಯಿಂದ ಆ ತುದಿ ವರೆಗೆ ಕೈ ಕೈ ಹಿಡಿದು ನಡೆಯುವುದು, ಮರಗಳ ಬುಡದಲ್ಲಿ ಕುಳಿತು ಪಿಸುಗುಟ್ಟುವುದು, ನೀರೊಳಗೆ ಇಳಿದು ಅವರು ಇವರ, ಇವರು ಅವರ ಹಸಿ ಮೈಯನ್ನು ಕ್ಯಾಮೆರಾದಲ್ಲಿ ಕ್ಲಿಕ್ಕಿಸುವ ದೃಶ್ಯ ಇಲ್ಲಿ ನಿತ್ಯ ನೂತನ. ಇತ್ತೀಚೆಗೆ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆ ಈ ತಾಣಕ್ಕೆ ಮತ್ತಷ್ಟು ಸೊಬಗು ತಂದಿದೆ.

300 ವರ್ಷಗಳ ಹಿಂದೆ, ಚಿಕ್ಕ ದೇವರಾಜ ಒಡೆಯರ್ (1673– 1704) ರೈತರ ಅನುಕೂಲಕ್ಕಾಗಿ ಇಲ್ಲಿ ಕಾವೇರಿ ನದಿಗೆ ಒಡ್ಡು ಕಟ್ಟಿಸಿದ್ದಾರೆ. ನದಿಯ ಬಲಕ್ಕೆ ಕಾಲುವೆ ತೋಡಿಸಿ ವಿರಿಜಾ (ದೇವಲೋಕದ ನದಿಯ ಹೆಸರು) ಎಂದು ಹೆಸರಿಟ್ಟಿದ್ದಾರೆ. ಕಾವೇರಿ ಬಲಕ್ಕೆ ಹರಿಯುವುದರಿಂದ ಇದು 'ಬಲಮುರಿ' ಎಂದಾಗಿದೆ. ಈ ಸ್ಥಳಕ್ಕೆ ತುಸು ಹಿಂದೆ ಮತ್ತೊಂದು ಒಡ್ಡು ನಿರ್ಮಿಸಿದ್ದು, ಅದು ಎಡಕ್ಕೆ ಹರಿಯುವುದರಿಂದ 'ಎಡಮುರಿ' ಎಂದು ಕರೆಸಿಕೊಳ್ಳುತ್ತದೆ.

ನದಿಗೆ ಇಲ್ಲಿ ಒಡ್ಡು ಕಟ್ಟುವ ಮುನ್ನ ಇದು ಧಾರ್ಮಿಕ ಸ್ಥಳವಾಗಿ ಪ್ರಾಧಾನ್ಯತೆ ಪಡೆದಿತ್ತು. ಅಗಸ್ತ್ಯ ಮುನಿಗಳು ತಮ್ಮ ಶಿಷ್ಯರೊಡಗೂಡಿ ಕಾವೇರಿ ತಟದಲ್ಲಿ ತಪಂಗೈದರು ಎಂಬುದಕ್ಕೆ ಇಲ್ಲಿರುವ ಚೋಳರ ಕಾಲದ (11ನೇ ಶತಮಾನ) ಅಗಸ್ತ್ಯೇಶ್ವರ ದೇವಾಲಯ ಸಾಕ್ಷಿಯಾಗಿದೆ. 800 ವರ್ಷಗಳಿಗೂ ಹಳೆಯದಾದ ಹನುಮಂತ ಹಾಗೂ ಗಣಪತಿ ದೇವಾಲಯಗಳು ಇಲ್ಲಿವೆ. ಶ್ರೀ ಮನ್ಮಹಾರಾಜರು ಕೃಷಿ ಭೂಮಿ ಹಾಗೂ ಕುಡಿಯುವ ಉದ್ದೇಶಕ್ಕೆ ನೀರೊದಗಿಸಲು ಒಡ್ಡು ಕಟ್ಟಿಸಿದ್ದು, ಅದು ರಮ್ಯ ತಾಣವೊಂದನ್ನು ಸೃಷ್ಟಿಸುತ್ತದೆ ಎಂಬ ಕಲ್ಪನೆ ಅವರಿಗೂ ಇರಲಿಕ್ಕಿಲ್ಲ.

**ದಾರಿ ಯಾವುದು:** ಬಲಮುರಿ ತಾಲ್ಲೂಕು ಕೇಂದ್ರ ಶ್ರೀರಂಗಪಟ್ಟಣದಿಂದ 12 ಕಿ.ಮೀ. ದೂರದಲ್ಲಿದೆ. ಮೈಸೂರಿನಿಂದ 16 ಕಿ.ಮೀ. ಅಂತರದಲ್ಲಿದೆ. ಮೈಸೂರಿನಿಂದ ಕೆಆರ್‌ಎಸ್‌ಗೆ ಹೋಗುವ ಮಾರ್ಗದಲ್ಲಿ, ಬೆಳಗೊಳ ಬಳಿ ಬಲಕ್ಕೆ ತಿರುಗಿ ಮೂರು ಕಿ.ಮೀ. ನಡೆದರೆ ಈ ತಾಣ ಸಿಗುತ್ತದೆ.